ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :

ಅ)

	1998-99	1999-2000 (ಫೆಬ್ರವರಿವರೆಗೆ)
	(ಲಕ್ಷ ರೂ.ಗಳಲ್ಲಿ)	
ಮುಖ್ಯಖನಿಜಗಳು	5054.64	4722.68
ಉಪಖನಿಜಗಳು	4442.22	3875.88
ಒಟ್ಟು	9496.86	8598.56

ಆ) 1998-99ನೇ ಸಾಲಿನಲ್ಲಿ ಒಟ್ಟು 13,14,34 ವಾಹನಗಳನ್ನು ತಪಾಸಣೆ ಮಾಡಿ ಒಟ್ಟು 23,18,966 ಲಕ್ಷ ರೂ.ಗಳನ್ನು ದಂಡದ ರೂಪದಲ್ಲಿ ವಸೂಲಿ ಮಾಡಲಾಗಿದೆ.

1999-2000 ಸಾಲಿನ ಜನವರಿ ಅಂತ್ಯದವರೆಗೆ ತನಿಖಾ ದಳ ಹಾಗೂ ಚೆಕ್ ಪೋಸ್ಟ್‌ಗಳಲ್ಲಿ ಒಟ್ಟು 10,95,90 ಗಳನ್ನು ತಪಾಸಣೆ ಮಾಡಿ ಒಟ್ಟು ರೂ. 22,19,679 ಗಳನ್ನು ದಂಡವಾಗಿ ವಸೂಲಿ ಮಾಡಲಾಗಿದೆ.

ಇ) ಅಕ್ರಮ ಗಣಿಗಾರಿಕೆಯನ್ನು ತಡೆ ಹಿಡಿಯಲು ಸರ್ಕಾರವು ಖನಿಜ ದೊರೆಯುವ ಮುಖ್ಯ ಸ್ಥಳಗಳಲ್ಲಿ ಖನಿಜ ವಿಭಾಗ ಕಛೇರಿಗಳನ್ನು ತೆಗೆದಿರುತ್ತದೆ. ಅಲ್ಲದೆ ಅಕ್ರಮ ಗಣಿಗಾರಿಕೆ ಹಾಗೂ ಸಾಗಾಣಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯದಲ್ಲಿ ದಕ್ಷಿಣ ಕನ್ನಡ, ಇಳಕಲ್, ಉತ್ತರ ಕನ್ನಡ, ಕನಕಪುರ, ಚಾಮರಾಜನಗರ, ಗುಲ್ಬರ್ಗಾ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಪ್ರಾರಂಭಿಸಲಾಗಿದೆ.

ಜೊತೆಗೆ ಕೇಂದ್ರ ಕಚೇರಿಯಲ್ಲಿ ಒಂದು ಸಂಚಾರಿ ತನಿಖಾ ದಳವನ್ನು ರಚಿಸಿ ಅಕ್ರಮ ಸಾಗಾಣಿಕೆಯನ್ನು ತಡೆಹಿಡಿಯುವ ಕಾರ್ಯದಲ್ಲಿ ನಿರತವಾಗಿದೆ.

ಕರಾವಳಿ ಜಿಲ್ಲೆಗಳ ಅಭಿವೃದ್ಧಿ

438 - ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಕರಾವಳಿ ಜಿಲ್ಲೆಗಳ ಅಭಿವೃದ್ಧಿಗಾಗಿ ಯಾವ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ? ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕು ಹಾಗೂ ಹುಡ್ಕೋ ಸಂಸ್ಥೆಯಿಂದ ಈ ಯೋಜನೆಗಳಿಗೆ ದೊರೆಯಬಹುದಾದ ಆರ್ಥಿಕ ನೆರವು ಎಷ್ಟು ಸಾಲ ಎಷ್ಟು?*

2. *ಈ ಮೇಲಿನ ಯೋಜನೆಗಳ ಕಾಮಗಾರಿಗಳು ಅನುಷ್ಠಾನಕ್ಕೆ ಬರುವಾಗ ಉತ್ತಮ ಗುಣಮಟ್ಟ ಕಾಪಾಡಲು ಪಾರದರ್ಶಕತೆಯಿಂದ ಕಾರ್ಯ ನಿರ್ವಹಿಸಲು ಯಾವ*

ಕಾರ್ಯಕ್ರಮಗಳನ್ನು ಮಾಡಲಾಗುವುದು ಹಾಗೂ ಸ್ಥಳೀಯ ಜನರ ಸಹಭಾಗಿತ್ವ ಹಾಗೂ ಮೇಲ್ವಿಚಾರಣೆಗೆ ಸಂಬಂಧಪಟ್ಟ ಕಾವಲು ಸಮಿತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

1. ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಸಹಾಯದಿಂದ ತೆಗೆದುಕೊಳ್ಳಲಾಗುವ ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ನಿರ್ವಹಣಾ ಯೋಜನೆಯಡಿಯಲ್ಲಿ ಕರಾವಳಿ ಜಿಲ್ಲೆಗಳ ಅಭಿವೃದ್ಧಿಗಾಗಿ ಈ ಕೆಳಗಿನ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ.

1. ನೀರು ಸರಬರಾಜು ವ್ಯವಸ್ಥೆಯ ಸುಧಾರಣೆ
2. ಒಳಚರಂಡಿ ವ್ಯವಸ್ಥೆಯ ಸುಧಾರಣೆ
3. ಅನ್ ಸೈಟ್ ಸ್ಯಾನಿಟೇಶನ್
4. ರಸ್ತೆಗಳ ಅಭಿವೃದ್ಧಿ
5. ಕಸಕಡ್ಡಿಗಳ ವಿಲೇವಾರಿ
6. ಚರಂಡಿಗಳ ಅಭಿವೃದ್ಧಿ
7. ಕೊಳಚೆ ಪ್ರದೇಶಗಳ ಅಭಿವೃದ್ಧಿ
8. ಕಡಿಮೆ ವೆಚ್ಚದ ಶೌಚಾಲಯಗಳು
9. ಸ್ಮಶಾನಗಳಲ್ಲಿ ಸಿಲಿಕಾನ್ ಪಾತ್ರೆಗಳ ಅಳವಡಿಕೆ
10. ಖಾಸಗಿ ಬಸ್ಸುಗಳ ತಂಗುದಾಣಗಳ ನಿರ್ಮಾಣ
11. ಮಾರುಕಟ್ಟೆಗಳ ನಿರ್ಮಾಣ ಮತ್ತು ಪುನರ್ ನಿರ್ಮಾಣ
12. ಸಮುದಾಯ ಪಾಲ್ಗೊಳ್ಳುವಿಕೆ ಮತ್ತು ಸಾಮರ್ಥ್ಯ ಸಂವರ್ಧನೆ
13. ಕರಾವಳಿ ಪರಿಸರ ನಿರ್ವಹಣೆ.

ಈ ಯೋಜನೆಯ ಒಟ್ಟು ಅಂದಾಜು ವೆಚ್ಚವು 251.4 ಮಿಲಿಯನ್ ಡಾಲರ್ (ಸುಮಾರು 1056 ಕೋಟಿ ರೂಪಾಯಿಗಳು) ಆಗಿದೆ. ಈ ಯೋಜನೆಗಾಗಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನಿಂದ 175 ಮಿಲಿಯನ್ ಡಾಲರ್ (ಸುಮಾರು 730 ಕೋಟಿ ರೂಪಾಯಿ) ಗಳನ್ನು ಸಾಲದ ರೂಪದಲ್ಲಿ ಪಡೆಯಲಾಗುವುದು. ಯೋಜನೆಯ ಬಾಕಿ ವೆಚ್ಚವನ್ನು ರಾಜ್ಯ ಸರ್ಕಾರ ಮತ್ತು ಪಾಲ್ಗೊಳ್ಳುವ ನಗರಸಭೆಗಳು ಭರಿಸುವರು.

2. ಈ ಯೋಜನೆಯನ್ನು ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ (ಕೆಯುಐಡಿಎಫ್‌ಸಿ)ಯು ದೇಶೀಯ ಮತ್ತು ಅಂತರರಾಷ್ಟ್ರೀಯ ಸಮಾರೋಚಕರ ಸಹಾಯದಿಂದ ಎಬಿಡಿಯವರ ನಿರ್ದಿಷ್ಟ ಮಾರ್ಗಸೂಚಿಗಳ ಪ್ರಕಾರ, ಅನುಷ್ಠಾನಗೊಳಿಸಲಿದೆ. ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದ ಅಧಿಕಾರಯುಕ್ತ ಸಮಿತಿಯು

ಈ ಯೋಜನೆಯ ಉಸ್ತುವಾರಿಕೆಯನ್ನು ಆಗಿಂದಾಗ್ಗೆ ಪರಿಶೀಲಿಸುವುದು. ಪಟ್ಟಣ ಮಟ್ಟದಲ್ಲಿ ಸ್ಪಿಯರಿಂಗ್ ಕಮಿಟಿಗಳು ಜಿಲ್ಲಾಧಿಕಾರಿಗಳು, ಪೌರಸಂಸ್ಥೆಗಳ ಆಯುಕ್ತರು / ಮುಖ್ಯಾಧಿಕಾರಿಗಳು ಹಾಗೂ ಚುನಾಯಿತ ಸದಸ್ಯರು, ಸರ್ಕಾರೇತರ ಸಂಸ್ಥೆಗಳು, ಸಮುದಾಯ ಗುಂಪುಗಳನ್ನೊಳಗೊಂಡಿದ್ದು, ಈ ಯೋಜನೆಯನ್ನು ಆಗಿಂದಾಗ್ಗೆ ಪರಿಶೀಲಿಸಿ ಪಾರದರ್ಶಿಕತೆ ಮತ್ತು ಗುಣ ಮಟ್ಟಗಳ ಉಸ್ತುವಾರಿಯನ್ನು ವಹಿಸುವರು.

ಅಧ್ಯಕ್ಷರು : ಮಂಡಿಸಲಾಯಿತು.

ದಿ : 23.3.2000ರ ಚುಕ್ಕೆ ಗುರ್ತಿನ ಹಾಗೂ ಚುಕ್ಕೆ ಗುರ್ತಿಲ್ಲದ ಪ್ರಶ್ನೋತ್ತರಗಳನ್ನು ಮಂಡಿಸುವುದು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 22-03-2000ರಂದು ಪ್ರಶ್ನೋತ್ತರ ವೇಳೆ ನಡೆಯದೇ ಇದ್ದುದರಿಂದ ಆ ದಿನದ ಚುಕ್ಕೆ ಗುರುತಿನ 3ನೇ ಪಟ್ಟಿಯ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳಿಗೆ ಮತ್ತು ಚುಕ್ಕೆ ಗುರುತಿಲ್ಲದ 100 ಪ್ರಶ್ನೆಗಳ ಪೈಕಿ 80ಕ್ಕೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ರಾಜ್ಯದ ಮಹಿಳಾ ವೈದ್ಯರ ಹುದ್ದೆಗಳ ವಿವರ

33 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದೆ ಇರುವ ತಾಲ್ಲೂಕು ಆಸ್ಪತ್ರೆಗಳ ಮತ್ತು ಪ್ರಾ. ಆ. ಕೇಂದ್ರಗಳ ಸಂಖ್ಯೆ ಎಷ್ಟೆಷ್ಟು ಮತ್ತು ಅವು ಯಾವುವು?

ಆ) ರಾಜ್ಯದಲ್ಲಿರುವ ಒಟ್ಟು ಮಹಿಳಾ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು?

ಇ) ಅವುಗಳ ಪೈಕಿ ಖಾಲಿ ಇರುವ ಮಹಿಳಾ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು?

ಈ) ಖಾಲಿ ಇರುವ ಹುದ್ದೆಗಳನ್ನು ತುಂಬದಿರಲು ಕಾರಣವೇನು?

ಉ) ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಸಚಿವರು) :

ಅ) 77 ಪಟ್ಟಿ ಲಗತ್ತಿಸಿದೆ.

ಆ) 835

ಇ) 105

ಈ) ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಬಹುತೇಕ ಮಹಿಳಾ ವೈದ್ಯಾಧಿಕಾರಿಗಳು ಪುರುಷ ವೈದ್ಯಾಧಿಕಾರಿಗಳ ಎದುರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇರುತ್ತದೆ.